**<u>ದಿಃ23-11-2023 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಬಿ ಎಸ್ ಡಿ ವಕೀಲರಿಂದಃ</u>**

ಮೇಲ್ಮನವಿದಾರರು ನನ್ನ ತಾಯಿ. ಮೇಲ್ಮನವಿದಾರರು ಈ ಮೇಲ್ಮನವಿ ಸಲ್ಲಿಸಲು ನನಗೆ ಅಧಿಕಾರ ಪತ್ರವನ್ನು ನೀಡಿರುತ್ತಾರೆ. ನಾನು ಅಸಲು ದಾವಾ ಸಂಖ್ಯೆ 194/2008 ರ ತೀರ್ಪು

ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಈ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ. ಆ ಅಧಿಕಾರ ಪತ್ರವನ್ನು ನಾನು ಈ ಅಪೀಲಿನಲ್ಲಿ ಸಲ್ಲಿಸಿರುತ್ತೇನೆ. ಆ ಅಧಿಕಾರ ಪತ್ರ ಈ ಕೇಸಿನ ಕಡತದಲ್ಲಿ ಇರುವುದಿಲ್ಲ. ಈಗ ತೋರುತ್ತಿರುವ ಅಧಿಕಾರ ಪತ್ರದ ದೃಢಿಕೃತ ನಕಲು ನನ್ನ ತಾಯಿಯವರು ನನಗೆ ಬರೆದುಕೊಟ್ಟ ಅಧಿಕಾರ ಪತ್ರದ ಪ್ರತಿಯಾಗಿರುತ್ತದೆ. ಅದು ನಿ.ಆರ್ 1 ಎಂದು ಗುರುತಿಸಲಾಯಿತು. ಆ ಅಧಿಕಾರ ಪತ್ರದಲ್ಲಿ ಅಸಲು ದಾವಾ ಸಂಖ್ಯೆ 194/2008 ರ ದಾವೆಯನ್ನು ನಡೆಸಲು ನೀಡಿರುವ ಬಗ್ಗೆ ನಮೂದಾಗಿರುವುದಿಲ್ಲ. ನನ್ನ ತಾಯಿಯವರು ಓ ಎಸ್ ನಂಬರ 194/2008 ಹಾಗೂ ಈ ಮೇಲ್ಮನವಿ ಸಲ್ಲಿಸಲು ಅಧಿಕಾರ ಪತ್ರವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆ ಕಾರಣ ಆ ಅಧಿಕಾರ ಪತ್ರವನ್ನು ಈ ಮೇಲ್ಮನವಿಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀಯ ದೃಢಿಕರಣ ಪತ್ರವು ನನಗೆ ಸಂಬಂಧಿಸಿದ್ದಾಗಿರುತ್ತದೆ. ನನಗೆ ಈ ಮೇಲ್ಮನವಿ ಸಲ್ಲಿಸಲು ಯಾವುದೇ ಅಧಿಕಾರ ಇಲ್ಲದೇ ಇದ್ದರೂ ಸಹ ಈ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಸಾಕ್ಷಿದಾರರ ಸಹಿ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್